

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ದೇವರಿಗೆ ನೆಗಡಿ ಆಗುತ್ತದೆಯೇ!....

ಎಲ್ಲಿಯೋ ಓದಿದ ನೆನಪು. ಇಂಗ್ಲೆಂಡಿನ ಒಂದು ಚರ್ಚಿನಲ್ಲಿ ಭಾನುವಾರದ ಪ್ರಾರ್ಥನಾಸಭೆ ಸೇರಿತ್ತು. ಪ್ರಾರ್ಥನೆಯ ನಂತರ ಪಾದ್ರಿಗಳು ಭಕ್ತಾದಿಗಳಿಂದ ಕಾಣಿಕೆಯನ್ನು ಸಂಗ್ರಹ ಮಾಡಲು ಒಬ್ಬ ಹುಡುಗನ ಕೈಯಲ್ಲಿ ನಿಧಿಡಬ್ಬಿಯನ್ನು ಕೊಟ್ಟು ಕಳುಹಿಸಿದರು. ಪ್ರಾರ್ಥನೆಗೆ ಬಂದವರು ಆ ಹುಡುಗ ವಂತಿಗೆ ಸಂಗ್ರಹಣೆಗಾಗಿ ತಮ್ಮ ಹತ್ತಿರ ಬಂದಾಗ ಶಕ್ತ್ಯಾನುಸಾರ ಕಾಣಿಕೆಯನ್ನು ಆ ಡಬ್ಬಿಯಲ್ಲಿ ಹಾಕಿದರು. ಅವರಲ್ಲಿ ಮೂವರು ಸ್ಕಾಟ್‌ಲ್ಯಾಂಡ್‌ನವರು ಇದ್ದರು. ತಮ್ಮ ಹತ್ತಿರ ಆ ಹುಡುಗ ಬರುತ್ತಿದ್ದಂತೆಯೇ ಒಬ್ಬ ಕುರ್ಚಿಯಿಂದ ಕೆಳಗೆ ಬಿದ್ದಂತೆ ನಟಿಸಿದ. ಇನ್ನಿಬ್ಬರು ಅವನನ್ನು ಹೊತ್ತುಕೊಂಡು ಚರ್ಚಿನಿಂದ ಹೊರಗೆ ನಡೆದರು! ಪಾಪ, ಆಯತಪ್ಪಿ ಬಿದ್ದ ಆ ವ್ಯಕ್ತಿಗೆ ಏನಾಯಿತೋ ಏನೋ ಎಂದು ಉಳಿದವರೆಲ್ಲರೂ ಅತ್ತ ಕಡೆ ನೋಡುತ್ತಾ ಅನುಕಂಪೆ ವ್ಯಕ್ತಪಡಿಸಿದರಂತೆ! ಆದರೆ ಆ ಮೂವರಿಗಿದ್ದ ಶ್ರದ್ಧೆ ದೇವರ ಮೇಲಲ್ಲ, ದುಡ್ಡಿನ ಮೇಲೆ!

ಹೀಗೆ ಇಂಗ್ಲೆಂಡಿನಲ್ಲಿ ಸ್ಕಾಟ್‌ಲ್ಯಾಂಡ್‌ನವರನ್ನು, ಐರಿಷ್‌ರವರನ್ನು, ವಾಲ್ಷ್‌ರವರನ್ನು ಕುರಿತು ಹಾಸ್ಯ ಮಾಡಿದರೆ, ಆಸ್ಟ್ರಿಯಾದೇಶದಲ್ಲಿ ವಿಯೆನ್ನಾ ಸಮೀಪದಲ್ಲಿರುವ ಬುರ್ಗೆನ್‌ಲ್ಯಾಂಡ್ (Burgenland) ಪ್ರಾಂತ್ಯದ ಜನರನ್ನು ಕುರಿತು ಹಾಸ್ಯಮಾಡುವುದನ್ನು ನೋಡಿದ್ದೇವೆ. ಆ ಪ್ರಾಂತ್ಯದಲ್ಲಿ ಹೆಚ್ಚಾಗಿ ರೈತರನ್ನು ಕುರಿತು ಹಾಸ್ಯಮಾಡುತ್ತಾರೆ. ಅಲ್ಲಿರುವ ಕ್ರೈಸ್ತರೆಲ್ಲರೂ ಬಹುತೇಕ ಕ್ಯಾಥೋಲಿಕ್ ಪಂಥದವರು. ಅವರ ಮುಖ್ಯ ಕಸುಬು ವ್ಯವಸಾಯವಾದುದರಿಂದ ಆ ಪ್ರದೇಶದಲ್ಲಿ ನೊಣಗಳು ಜಾಸ್ತಿ. ಪಾಶ್ಚಾತ್ಯ ಕ್ರೈಸ್ತರ ಮದುವೆಯ ಸಂದರ್ಭದಲ್ಲಿ ನವವಧುವು ಚರ್ಚಿಗೆ ಹೋಗುವಾಗ ಪರಿಶುಭ್ರಶ್ವೇತವಸ್ತ್ರಧಾರಿಯಾಗಿರುತ್ತಾಳೆ. ಮುಡಿಯಿಂದ ಅಡಿಯವರೆಗೆ ಧರಿಸುವ ಅವಳ ಸಾಂಪ್ರದಾಯಿಕ ಉಡುಗೆ ಓಡಾಡುವಾಗ ಒಂದು ರೀತಿಯಲ್ಲಿ ನೆಲವನ್ನು ಗುಡಿಸುತ್ತಿರುತ್ತದೆ. ಆದಕಾರಣ ಅವಳ ಹಿಂಬದಿಯಲ್ಲಿ ಒಬ್ಬಳು ಚಿಕ್ಕಬಾಲಕಿ ಪರಿಚಾರಿಕೆಯಾಗಿ (bridesmaid) ಇರುತ್ತಾಳೆ. ಆ ಬಾಲಕಿ ನವವಧುವಿನ ಉಡುಗೆ ನೆಲಕ್ಕೆ ತಾಗದಂತೆ ಎಚ್ಚರವಹಿಸಿ ಅದರ ಅಂಚನ್ನು (veil) ಎತ್ತಿ ಹಿಡಿದುಕೊಂಡಿರುತ್ತಾಳೆ. ಈ ಸಂದರ್ಭವನ್ನು ಕುರಿತು ಅಲ್ಲಿಯ ಜನರು ಮಾಡುವ ಹಾಸ್ಯ ಹೀಗಿದೆ:

- Why do the bridesmaids carry a basketful of cow dung in their hands?
  **(ನವವಧುವಿನ ಹಿಂದಿರುವ ಪರಿಚಾರಿಕೆಯರು ತಮ್ಮ ಕೈಯಲ್ಲಿ ಸಗಣಿಯ ಪುಟ್ಟಿಯನ್ನು ಏಕೆ ಹಿಡಿದುಕೊಂಡಿರುತ್ತಾರೆ?)**
- So that the flies do not sit on the bride?
  **(ನವವಧುವಿನ ಮೇಲೆ ನೊಣಗಳು ಕೂರದಿರಲಿ ಎಂದು!)**

ಇದೇ ರೀತಿ ಬುರ್ಗೆನ್‌ಲ್ಯಾಂಡ್‌ನವರನ್ನು ಕುರಿತ ಮತ್ತೊಂದು ಹಾಸ್ಯವಿದೆ:

- Why do the Burgenländer keep the little chillies on the television
  **(ಬುರ್ಗೆನ್‌ಲ್ಯಾಂಡಿನ ಜನರು ಏಕೆ ದೂರದರ್ಶನದ ಮೇಲೆ ಮೆಣಸಿನಕಾಯಿಗಳನ್ನು ಇಡುತ್ತಾರೆ?)**
- So that the television becomes sharp
  **(ದೂರದರ್ಶನ ಚುರುಕಾಗಲಿ ಎಂದು!)**

ಈ ರೀತಿ ಜಗತ್ತಿನಾದ್ಯಂತ ಒಂದೊಂದು ದೇಶದಲ್ಲಿ ಒಂದೊಂದು ಪ್ರಾಂತ್ಯದ ಅಥವಾ ಜನಾಂಗದ ಜನರನ್ನು ಕುರಿತು ಅಪಹಾಸ್ಯಮಾಡುವುದನ್ನು ಕಾಣಬಹುದು. ಇದು ವಿಭಿನ್ನ ಸಂಸ್ಕೃತಿಯ ಜನರ ಬಗ್ಗೆ ಇರುವ ಅಸಹನೆ ಎಂಬುದು ತಣ್ಣಗೆ ವಿಚಾರ ಮಾಡಿದರೆ ತಿಳಿಯುತ್ತದೆ. ನಮ್ಮ ದೇಶದಲ್ಲಂತೂ ಸರ್‌ದಾರ್ಜಿಗಳನ್ನು ಕುರಿತು ಹಾಸ್ಯ ಮಾಡುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಗ್ಯಾನಿ ಜೇಲ್‌ಸಿಂಗ್‌ರವರು ನಮ್ಮ ದೇಶದ ರಾಷ್ಟ್ರಪತಿಗಳಾಗಿದ್ದಾಗ ಅಮೇರಿಕಾದಲ್ಲಿ ನೆಲೆಸಿರುವ ಭಾರತೀಯರ ಮಕ್ಕಳಲ್ಲಿ ಪ್ರಚಲಿತವಿದ್ದ ಹಾಸ್ಯ ಹೀಗಿದೆ: ರಾಷ್ಟ್ರಪತಿ ಗ್ಯಾನಿ ಜೇಲ್‌ಸಿಂಗ್‌ರವರಿಗೆ ಅಷ್ಟಾಗಿ ಇಂಗ್ಲೀಷ್‌ನಲ್ಲಿ ಪರಿಣತಿ ಇರಲಿಲ್ಲ. ಅವರು ಪಯಣಿಸುತ್ತಿದ್ದ ವಿಮಾನ ವಾಷಿಂಗ್‌ಟನ್ ತಲುಪಿದಾಗ ಜೇಲ್‌ಸಿಂಗ್‌ರವರು ಬೇಗನೆ ಆಸನದಿಂದ ಎದ್ದು ಇಳಿಯಲು ಮುಂದಾದರು. ವಿಮಾನದ ಬಾಗಿಲು ತೆರೆಯಲು ಸನ್ನದ್ಧಳಾಗಿದ್ದ ಗಗನಸಖಿ ರಾಷ್ಟ್ರಪತಿಗಳಿಗೆ "Please wait" ಎಂದು ಹೇಳಿದಳು. ಜೇಲ್‌ಸಿಂಗ್‌ರವರು ಗಗನಸಖಿ ತಮ್ಮ ತೂಕವನ್ನು (weight) ಕೇಳುತ್ತಿದ್ದಾಳೆಂದು ತಪ್ಪಾಗಿ ಗ್ರಹಿಸಿ ಅವರ ತೂಕ ಎಷ್ಟು ಕೆ.ಜಿ. ಇದೆ ಎಂಬುದನ್ನು ತಟ್ಟನೆ ಹೇಳಿಬಿಟ್ಟರಂತೆ! ಅಮೇರಿಕಾದ ಹಿಂದಿನ ಅಧ್ಯಕ್ಷ ಜಾರ್ಜ್ ಬುಷ್‌ರವರನ್ನು ಅವರ ದಡ್ಡತನದ ಕಾರಣದಿಂದಾಗಿ ಅನಿವಾಸಿ ಭಾರತೀಯರು 'ಸರ್ದಾರ್ ಬುಷ್' ಎಂದು ಕರೆಯುತ್ತಾರೆ!

ಅಮೇರಿಕಾದಲ್ಲಿ ಯೆಹೂದಿ (Jews) ಜನಾಂಗದವರ ಜಿಪುಣತನವನ್ನು ಕುರಿತು ಬಹಳವಾದ ಹಾಸ್ಯದ ಮಾತುಗಳಿವೆ. ಯೆಹೂದಿ ಜನಾಂಗದವರು ತುಂಬಾ ಬುದ್ಧಿವಂತರು. ಸಾಪೇಕ್ಷಸಿದ್ಧಾಂತವನ್ನು (Theory of

Relativity) ಕಂಡುಹಿಡಿದ ಜಗತ್ಪ್ರಸಿದ್ಧವಿಜ್ಞಾನಿ ಐನ್‌ಸ್ಟೈನ್, ಮೂಕಿಸಿನಿಮಾದ ಸುಪ್ರಸಿದ್ಧ ಹಾಸ್ಯನಟ ಚಾರ್ಲಿ ಚಾಪ್ಲಿನ್ ಈ ಜನಾಂಗದವರು. ಅಮೇರಿಕಾದ ಬ್ಯಾಂಕುಗಳು, ವ್ಯಾಪಾರೋದ್ದಿಮೆ, ಮಾಧ್ಯಮಗಳು, ಲಾಸ್ ಆಂಜಲೀಸ್‌ನಲ್ಲಿರುವ ಹಾಲಿವುಡ್ ಸಿನೆಮಾ ಪ್ರಪಂಚ ಈ ಜನಾಂಗದವರ ಹಿಡಿತದಲ್ಲಿವೆ. ನ್ಯೂಯಾರ್ಕಿನ ಪ್ರಸಿದ್ಧ ಪತ್ರಿಕೆ "New York Times" ಸಹ ಇವರ ಕೈವಶದಲ್ಲಿದೆ. ರಾಜಕೀಯವಾಗಿಯೂ ಇವರು ಪ್ರಬಲರು. ಇಸ್ರೇಲ್ ದೇಶದ ಅಧ್ಯಕ್ಷರ ಚುನಾವಣೆ ಆ ದೇಶದ ರಾಜಧಾನಿಯಾದ 'ಟೆಲವಿವ್'ನಲ್ಲಿ (Tel Aviv) ನಡೆಯದೆ ಅಮೇರಿಕಾದ ನ್ಯೂಯಾರ್ಕ್‌ನಲ್ಲಿ ನಡೆಯುತ್ತದೆಯೆಂದು ರಾಜಕೀಯ ಪರಿಣತರು ಹೇಳುತ್ತಾರೆ. ಅಮೇರಿಕಾ ಯಾವಾಗಲೂ ಇಸ್ರೇಲನ್ನು ಬೆಂಬಲಿಸುತ್ತಾ ಬಂದಿರುವುದು ಈ ಜನಾಂಗದವರ ಹಿಡಿತದಲ್ಲಿರುವ ಕಾರಣ ಎಂದು ಅವರ ಅಭಿಪ್ರಾಯ. ಇವರಲ್ಲಿರುವ ಸಾಮಾಜಿಕ ಒಗ್ಗಟ್ಟು ಬೇರೆಲ್ಲೂ ಕಾಣಸಿಗದು. ಹಣಕಾಸಿನ ವಿಚಾರದಲ್ಲಿ ಇವರು ತುಂಬಾ ಲೆಕ್ಕಾಚಾರಸ್ಥರಾಗಿದ್ದರೂ ತಮ್ಮ ಜನಾಂಗದವರು ಯಾರಾದರೂ ಕಷ್ಟದಲ್ಲಿದ್ದರೆ ಅವರು ಮುಂದೆ ಬರಲು ಬಹಳ ಸಹಾಯಮಾಡುತ್ತಾರೆ. ಈ ಜನಾಂಗದವರಲ್ಲಿ ಯಾರಾದರೂ ಕಾಯಿಲೆಯಿಂದ ಹಾಸಿಗೆ ಹಿಡಿದು ಸಾಯುವ ಸ್ಥಿತಿಯಲ್ಲಿದ್ದರೆ ಅವರ ಹೆಸರನ್ನು ಬದಲಾಯಿಸುವ ಪದ್ಧತಿ ಇತ್ತು. ಇದರಿಂದ ಸಾವಿನ ಅಧಿದೇವತೆಯ ದೂತರು ಬಂದಾಗ ತಬ್ಬಿಬ್ಬಾಗಿ ಬರಿಗೈಲಿ ವಾಪಾಸು ಹೋಗುವುದರಿಂದ ಬದುಕಿ ಉಳಿಯುತ್ತಾರೆಂಬ ನಂಬಿಕೆ ಇವರಲ್ಲಿತ್ತು. ಹಾಗೆ ಬದುಕಿದ ಉದಾಹರಣೆಗಳೂ ಇವೆಯೆಂದು ಕೇಳಿದ್ದೇವೆ. ಸಾವನ್ನು ಗೆಲ್ಲಲು ಎಂತಹ ಸುಲಭೋಪಾಯವಿದು! ಸತ್ಯವಾನ್ ಸಾವಿತ್ರಿಗೆ ಈ ವಿಚಾರ ಗೊತ್ತಿದ್ದರೆ ಯಮರಾಜನಿಂದ ಯಾವ ವರವನ್ನೂ ಕೇಳುವ ಅವಶ್ಯಕತೆ ಇರುತ್ತಿರಲಿಲ್ಲ!

ಯೆಹೂದಿ ಧರ್ಮದ ಪಾದ್ರಿಗಳನ್ನು 'ರಾಬೈ' (Rabbi) ಎಂದು ಕರೆಯುತ್ತಾರೆ. ಇವರನ್ನು ಕುರಿತು ಅಮೇರಿಕಾದ ಮಕ್ಕಳು ಹೇಳುವ ಒಂದು ಹಾಸ್ಯಚಟಾಕಿ ಹೀಗಿದೆ: ವಿಭಿನ್ನಧರ್ಮೀಯರಾದ ಮೂವರು ವ್ಯಕ್ತಿಗಳು ಅವರಲ್ಲೊಬ್ಬ 'ರಾಬೈ' ತಮ್ಮ ಭಕ್ತಾದಿಗಳಿಂದ ನಿಧಿಯನ್ನು ಸಂಗ್ರಹಮಾಡಿಕೊಂಡು ಬಂದು ಅವರವರ ಪ್ರಾರ್ಥನಾ ಮಂದಿರಗಳಿಗೆ ಹೋದರು. ಒಳಗೆ ಹೋದವರಲ್ಲಿ ಒಬ್ಬ ನೆಲದ ಮೇಲೆ ಸೀಮೆಸುಣ್ಣದಿಂದ ಒಂದು ಉದ್ದನೆಯ ಗೆರೆಯನ್ನು ಎಳೆದ. ದೇವರ ವಿಗ್ರಹದ ಎದುರು ನಿಂತು "ಓ ದೇವರೇ! ನಾನು ಭಕ್ತರಿಂದ ಸಂಗ್ರಹಿಸಿ ತಂದ ಈ ಕಾಣಿಕೆಯನ್ನು ಮೇಲಕ್ಕೆ ಎಸೆಯುತ್ತೇನೆ. ಇದರಲ್ಲಿ ನಾನು ಎಳೆದ ಗೆರೆಯ ಎಡಭಾಗಕ್ಕೆ ಬಿದ್ದ ಹಣವನ್ನು ನನ್ನ ಸ್ವಂತಕ್ಕೆ ಉಪಯೋಗಿಸಿಕೊಳ್ಳುತ್ತೇನೆ, ಗೆರೆಯ ಬಲಭಾಗಕ್ಕೆ ಬಿದ್ದ ಹಣವನ್ನು ನಿನ್ನ ಸೇವೆಗೆ ಮುಡುಪಾಗಿಡುತ್ತೇನೆ' ಎಂದು ಹೇಳಿ ಕಣ್ಮುಚ್ಚಿ ಹಣವನ್ನು ಮೇಲಕ್ಕೆ ಎಸೆದನಂತೆ! ಇದೇ ರೀತಿ ಇನ್ನೊಬ್ಬ ವ್ಯಕ್ತಿ ಮೊದಲಿನವನಂತೆ ಉದ್ದನೆಯ ಗೆರೆಯನ್ನು ಎಳೆಯದೆ ದುಂಡನೆಯ ವೃತ್ತವನ್ನು (circle) ಎಳೆದು 'ಓ ದೇವರೇ! ವೃತ್ತದೊಳಗೆ ಬಿದ್ದ ಹಣವನ್ನು ನಿನ್ನ ಸೇವೆಗೆ ಮುಡುಪಾಗಿಡುತ್ತೇನೆ, ವೃತ್ತದ ಹೊರಗೆ ಬಿದ್ದ ಹಣವನ್ನು ಮಾತ್ರ ನನ್ನ ಸ್ವಂತಕ್ಕೆ ಬಳಸಿಕೊಳ್ಳುತ್ತೇನೆ' ಎಂದು ಹೇಳಿ ಕಣ್ಮುಚ್ಚಿ ಭಕ್ತರ ಕಾಣಿಕೆಯನ್ನು ಮೇಲಕ್ಕೆ ಎಸೆದನಂತೆ! ಮೂರನೆಯವನಾದ 'ರಾಬೈ' ಉಳಿದಿಬ್ಬರಂತೆ ನೆಲದ ಮೇಲೆ ಯಾವ ಗೆರೆಯನ್ನೂ ಎಳೆಯದೆ 'ಓ ದೇವರೇ! ನೀನು ಸರ್ವಜ್ಞ, ಸರ್ವವ್ಯಾಪಿ, ಸರ್ವಶಕ್ತ ಎಂದು ನಾನು ಬಲ್ಲೆ! ಭಕ್ತರಿಂದ ಸಂಗ್ರಹಿಸಿ ತಂದ ಈ ಕಾಣಿಕೆಯನ್ನು ಮೇಲಕ್ಕೆ ಎಸೆಯುತ್ತೇನೆ. ನಿನಗೆ ಬೇಕಾದಷ್ಟನ್ನು ನೀನು ತೆಗೆದುಕೋ, ನೀನು ಅನುಗ್ರಹಿಸಿ ಕೆಳಗೆ ಬೀಳಿಸಿದಷ್ಟು ಹಣವನ್ನು ಮಾತ್ರ ನಾನು ನನ್ನ ಸ್ವಂತಕ್ಕೆ ಬಳಸಿಕೊಳ್ಳುತ್ತೇನೆ" ಎಂದು ಹೇಳಿ ಕಣ್ಮುಚ್ಚಿ ಭಕ್ತರು ಕೊಟ್ಟ ಕಾಣಿಕೆಯನ್ನು ಮೇಲಕ್ಕೆ ಎಸೆದನಂತೆ!

ಮೇಲಿನ ಹಾಸ್ಯ ಪ್ರಕರಣ ಒಂದು ಕಾಲ್ಪನಿಕ ಕಥೆ ಇರಬಹುದು. ಆದರೆ ಇದರಲ್ಲಿ ಚಿತ್ರಿಸಿರುವ ಯೆಹೂದಿಗಳ ಮನೋಧರ್ಮ ಹೇಗಿರುತ್ತದೆಯೆಂದು ನಮ್ಮ ಸ್ವಂತ ಅನುಭವಕ್ಕೆ ಬಂದ ರೋಚಕ ಘಟನೆ ಹೀಗಿದೆ: ಬಹಳ ವರ್ಷಗಳ ಹಿಂದೆ ದಕ್ಷಿಣ ಅಮೇರಿಕಾದ ಬೊಲಿವಿಯಾ (Bolivia) ದೇಶದಲ್ಲಿ ಏರ್ಪಡಿಸಿದ್ದ ಒಂದು ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಆಹ್ವಾನಿತರಾಗಿ ಹೋಗಿದ್ದೆವು. ಆ ಸಮ್ಮೇಳನಕ್ಕೆ ಇಸ್ರೇಲ್ ದೇಶದಿಂದ ಒಬ್ಬರು 'ರಾಬೈ' ಬಂದಿದ್ದರು. ಸಮ್ಮೇಳನದ ಕೊನೆಯ ದಿನವಾದ ಭಾನುವಾರ ಅಲ್ಲಿಯ ಚರ್ಚಿನಲ್ಲಿ ವಿಶೇಷ ಪ್ರಾರ್ಥನೆ ಇತ್ತು. ಅದಕ್ಕೆ ಮುಂಚೆ ಕೆಲವಾರು ಗಂಟೆಗಳ ಕಾಲ ಬಿಡುವಿತ್ತು. ಆ ಸಮಯದಲ್ಲಿ ಬೊಲಿವಿಯಾದಲ್ಲಿರುವ 'ಜ್ವಾಲಾಮುಖಿ' (Volcano) ಗಳನ್ನು ನೋಡಿಕೊಂಡು ಬರೋಣವೆಂಬ ಮನಸ್ಸಾಯಿತು. ಇಸ್ರೇಲ್‌ನಿಂದ ಬಂದಿದ್ದ ಆ 'ರಾಬೈ', ಇಂಗ್ಲೆಂಡಿನಿಂದ ಬಂದಿದ್ದ ಒಬ್ಬ Professor of Religion, ನಾವು ಮತ್ತು ನಮ್ಮ ಪೂಜಾಮರಿ ಒಟ್ಟಿಗೆ ಒಂದೇ ಟ್ಯಾಕ್ಸಿಯಲ್ಲಿ ಜ್ವಾಲಾಮುಖಿಯನ್ನು ನೋಡಲು ಹೊರಟೆವು. ಟ್ಯಾಕ್ಸಿ ಬಾಡಿಗೆ ಮತ್ತಿತರ ಖರ್ಚನ್ನು ಎಲ್ಲರೂ ಸಮನಾಗಿ ಹಂಚಿಕೊಳ್ಳಬೇಕೆಂದು ನಿರ್ಧರಿಸಲಾಗಿತ್ತು. ನಮ್ಮ ಹತ್ತಿರ ಆ ದೇಶದ ಕರೆನ್ಸಿ ಮುಗಿದುಹೋಗಿತ್ತು. ನಾವು ಭರಿಸಬೇಕಾದ ಖರ್ಚನ್ನು ತತ್ಸಮನಾದ ಅಮೇರಿಕನ್ ಡಾಲರ್‌ಗಳಲ್ಲಿ ಕೊಡುವುದಾಗಿ ಹೇಳಿದ್ದೆವು. ಅದರಂತೆ ವಾಪಾಸ್ಸು ಬಂದು ಟ್ಯಾಕ್ಸಿಯಿಂದ ಇಳಿಯುವಾಗ ಆ 'ರಾಬೈ' ಲೆಕ್ಕಹಾಕಿ ಹೇಳಿದಷ್ಟು ಡಾಲರ್‌ಗಳನ್ನು ಮರುಮಾತನಾಡದೆ ಕೊಟ್ಟೆವು. ನಂತರ ಎಲ್ಲರೂ ಒಟ್ಟಿಗೆ ಚರ್ಚಿಗೆ ಹೋದೆವು. ಪಾದ್ರಿಗಳು ಪರದೇಶಗಳಿಂದ ಬಂದ ಅತಿಥಿಗಳೆಲ್ಲರನ್ನೂ ಆತ್ಮೀಯತೆಯಿಂದ ಬರಮಾಡಿಕೊಂಡು ನಮಗೆಲ್ಲರಿಗೂ ವಿಶೇಷ ಆಸನದ ವ್ಯವಸ್ಥೆ ಮಾಡಿದ್ದರು. ಪ್ರಾರ್ಥನೆ ಆರಂಭವಾಯಿತು. ಎಲ್ಲರೂ ಎದ್ದುನಿಂತೆವು. ಸುಮಧುರವಾದ ಪ್ರಾರ್ಥನಾಸಂಗೀತ ಕೇಳಿಬರುತ್ತಿತ್ತು. ಎಲ್ಲರೂ ಕಣ್ಮುಚ್ಚಿ ಧ್ಯಾನಾಸಕ್ತರಾಗಿದ್ದರು. ಸ್ವಲ್ಪ ಹೊತ್ತಿನಲ್ಲಿಯೇ ಪಕ್ಕದಲ್ಲಿದ್ದ 'ರಾಬೈ' ನಮ್ಮ ಗಮನ ಸೆಳೆದು ಒಂದು ಸಣ್ಣ ಕೈಚೀಟಿಯನ್ನು ಕೊಟ್ಟರು. ಅದರಲ್ಲಿ ಅವರು ಹೀಗೆ ಬರೆದಿದ್ದರು: "I just now realize that you still vow me another dollar!" (ನೀವು ನನಗೆ ಇನ್ನೂ ಒಂದು ಡಾಲರ್ ಕೊಡಬೇಕಾಗಿದೆ ಎಂದು ನನಗೆ ಈಗ ಗೊತ್ತಾಗುತ್ತಿದೆ). ಎಲ್ಲರೂ ಮೌನವಾಗಿ ದೇವರನ್ನು ಕುರಿತು ಧ್ಯಾನಿಸುತ್ತಿದ್ದರೆ ಅವರು ಹಣದ ಲೆಕ್ಕಾಚಾರ ಹಾಕಿದ್ದರು! "Blessed are the poor in spirit, for their's is the Kingdom of Heaven" ಎಂಬ ಬೈಬಲ್ ವಾಕ್ಯ ನೆನಪಾಯಿತು. ಜಿಪುಣರನ್ನು ಕುರಿತು ಬಸವಣ್ಣನವರು ಹೇಳಿರುವ ಈ ಕೆಳಗಿನ ಹಿತನುಡಿಯೂ ಸ್ಮರಣೆಗೆ ಬಂತು.

**ಧನವನಿರಿಸದಿರಾ, ಇರಿಸಿದರೆ ಭವ ಬಪ್ಪುದು ತಪ್ಪದು....**
**ನೆಲನಸಗೆದು ಮಡುಗದಿರಾ! ನೆಲ ನುಂಗಿದಡುಗುಳುವುದೆ?**
**ಕಣ್ಣಿನಲಿ ನೋಡಿ ಮಣ್ಣಿನಲಿ ನೆರಹಿ ಉಣ್ಣದೆ ಹೋಗದಿರಾ!**

ಒಂದು ಡಾಲರಿಗಾಗಿ ಹಪಹಪಿಸುತ್ತಿದ್ದ ಆ ರಾಬೈಗೆ ಮರುಲೆಕ್ಕ ಹಾಕದೆ ಕೂಡಲೇ ನಮ್ಮ ಪೂಜಾಮರಿಯಿಂದ ಹಣ ಕೊಡಿಸಿ ಪ್ರಾರ್ಥನೆಯ ನಂತರ ಎಲ್ಲರಿಂದ ಬೀಳ್ಕೊಂಡು ವಾಪಾಸ್ಸು ನಮ್ಮ ಕೊಠಡಿಗೆ ಬರುವಾಗ ಚಿಂತಾಮಗ್ನರಾದೆವು. ವ್ಯವಹಾರದಲ್ಲಿ ತನಗೆ ಬರಬೇಕಾದ ಹಣವನ್ನು ಆ ರಾಬೈ ಬಿಚ್ಚುಮನಸ್ಸಿನಿಂದ ಕೇಳಿದ್ದರಲ್ಲಿ ತಪ್ಪೇನು? ಕೇಳಿದ ಸಂದರ್ಭ ಸರಿಯಲ್ಲ, ಪ್ರಾರ್ಥನೆ ಮುಗಿದ ಮೇಲೆ ಕೇಳಬಹುದಿತ್ತಲ್ಲವೇ?

ದೆಹಲಿಯಲ್ಲಿ ಕರ್ನಾಟಕ ಭವನದ ವಿಶೇಷ ಅಧಿಕಾರಿಯಾಗಿ ಕೆಲಸಮಾಡುತ್ತಿದ್ದ ಡಾ. ಮನು ಕುಲಕರ್ಣಿಯವರ ಮಗಳ ನೆನಪಾಯಿತು. ಒಮ್ಮೆ ಅಪರೂಪಕ್ಕೆ ದೆಹಲಿಗೆ ಹೋದಾಗ ಡಾ. ಕುಲಕರ್ಣಿ ಮತ್ತು ಅವರ ಮಡದಿ ಶ್ರೀಮತಿ ವಿಜಯಲಕ್ಷ್ಮಿ ನಮ್ಮನ್ನು ಪೂಜೆಗೆಂದು ಮನೆಗೆ ಆಹ್ವಾನಿಸಿದರು. ಪ್ರಾತಃಕಾಲ ಅವರ ಮನೆಯಲ್ಲಿ ಪೂಜೆಗೆ ಅಣಿಮಾಡಿದರು. ಅವರಿಗೆ ತಮ್ಮ ಮುದ್ದಿನ ಮಗಳು ಕು. ಶ್ವೇತಾಳಿಗೆ ನಮ್ಮಿಂದ ಲಿಂಗದೀಕ್ಷೆಯನ್ನು ಮಾಡಿಸಬೇಕೆಂಬ ಹಂಬಲವಿತ್ತು. ಕು. ಶ್ವೇತಾಳಿಗೆ ಅಷ್ಟಾಗಿ ಕನ್ನಡ ಬರುತ್ತಿರಲಿಲ್ಲ. ಆಂಗ್ಲಭಾಷೆಯಲ್ಲಿಯೇ ಬಸವಣ್ಣನವರ ಈ ಕೆಳಗಿನ ವಚನದ ಅರ್ಥವನ್ನು ವಿವರಿಸಿದೆವು:

**ಜಗದಗಲ ಮುಗಿಲಗಲ, ಮಿಗೆಯಗಲ ನಿಮ್ಮಗಲ**
**ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ**
**ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ**
**ಅಗಮ್ಯ ಅಗೋಚರ ಅಪ್ರತಿಮ ಲಿಂಗವೇ**
**ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ**

ಜಗದ್ವ್ಯಾಪಿಯಾದ ವಿಶ್ವಚೈತನ್ಯದ ಸಾಕಾರಮೂರ್ತಿಯೇ ಕೈಯೊಳಗಿಟ್ಟು ಪೂಜಿಸುವ 'ಇಷ್ಟಲಿಂಗ'ವೆಂದು ತಿಳಿಹೇಳಿ ಪೂಜಾವಿಧಾನವನ್ನು ತೋರಿಸಿಕೊಟ್ಟೆವು. ಏಳೆಂಟು ವರ್ಷದ ಮುಗ್ಧ ಬಾಲಕಿ ಶ್ವೇತಾ ಗಮನವಿಟ್ಟು ಕೇಳಿದಳು. ಪೂಜಾಸಂದರ್ಭದಲ್ಲಿ ಕೈಯೊಳಗಿರುವ ಲಿಂಗಕ್ಕೆ ಅಭಿಷೇಕಮಾಡಿದ ನಂತರ ಕರಡಿಗೆಯಲ್ಲಿಟ್ಟುಕೊಳ್ಳುವ ಮೊದಲು ಕರವಸ್ತ್ರದಲ್ಲಿ ಚೆನ್ನಾಗಿ ಒರೆಸಬೇಕು ಏಕೆ ಗೊತ್ತೇ? ಎಂದು ಕೇಳಿದ್ದಕ್ಕೆ ಆ ಬಾಲಕಿ ಕೊಟ್ಟ ಉತ್ತರ: "Yes, Swamiji. Otherwise God will catch cold!" (ಹೌದು, ಗುರುಗಳೇ, ಹಾಗೆ ಮಾಡದಿದ್ದರೆ ದೇವರಿಗೆ ನೆಗಡಿ ಆಗುತ್ತದೆ). ಮುಗ್ಧಬಾಲಕಿಯ ಮುಖವನ್ನು ನೋಡಿ ನಮಗೆ ಕೋಳೂರು ಕೊಡಗೂಸಿನ ಕಥೆ ನೆನಪಾಯಿತು. ದೇವರ ಬಗ್ಗೆ ಆ ಬಾಲಕಿಯ ಪವಿತ್ರಹೃದಯದಲ್ಲಿದ್ದ ಸುಮಧುರ ಭಾವನೆಗಳು ಯಾವ ಭಕ್ತರ ಮತ್ತು ಧರ್ಮಗುರುಗಳ ಹೃದಯದಲ್ಲಿರಲು ಸಾಧ್ಯ? ನೀವೇ ಹೇಳಿ.

ಸಹೃದಯ ಓದುಗರೇ! ಈ ಲೇಖನ ಓದುವ ವೇಳೆಗೆ ನಾವು ದೂರದ ಅಮೇರಿಕಾ ಪ್ರವಾಸದಲ್ಲಿರುತ್ತೇವೆ. ನಮ್ಮ ಕಣ್ಮುಂದೆ ಹುಟ್ಟಿ ಈಗ ದೊಡ್ಡವರಾಗಿ ಬೆಳೆದಿರುವ ಇಂತಹ ನೂರಾರು ಅನಿವಾಸಿ ಭಾರತೀಯರ ಮಕ್ಕಳು ಅಲ್ಲಿದ್ದಾರೆ. ನಾವು ಮೊದಲು ನೋಡಿದಾಗ ಯಾವ ವಯಸ್ಸಿನವರಾಗಿದ್ದರೋ ಅನೇಕರಿಗೆ ಆ ವಯಸ್ಸಿನ ಮಕ್ಕಳು ಈಗ ಇದ್ದಾರೆ. ವಿಶ್ವವಿಖ್ಯಾತ ಚಿಕಾಗೋ ನಗರದಲ್ಲಿ ಏರ್ಪಡಿಸಿರುವ 'ಉತ್ತರ ಅಮೇರಿಕಾ ವೀರಶೈವ ಸಮಾಜ'ದ 32ನೆಯ ವಾರ್ಷಿಕ ಸಮ್ಮೇಳನಕ್ಕೆ ಬರಲು ಅವರ ಒತ್ತಾಸೆಯ ಕರೆ ಬಂದಿರುವಾಗ ಇಲ್ಲವೆನ್ನಲು ಆದೀತೇ?

1.7.2009

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑